ದಿನಾಂಕ -05.03.2026

**ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**- ಮುಂದುವರಿದ ಮುಖ್ಯ ವಿಚಾರಣೆ - ಎದುರುದಾರರ ಪರ ಶ್ರೀ ಎಂ.ಬಿ.ಆರ್. ವಕೀಲರಿಂದ -**

ನಾನು ಈ ಕೇಸಿನ ಎದುರುದಾರರ ಇಲಾಖೆಯಲ್ಲಿ ಎ.ಇ. ಎಂದು ಕೆಲಸ ನಿರ್ವಹಿಸುತ್ತಿದ್ದು, ನನ್ನ ಮುಖ್ಯವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸರಿ ಇರುತ್ತವೆ.

ನನ್ನ ಸಾಕ್ಷಿಗೆ ಬೆಂಬಲಿತವಾಗಿ, ಎಇಇ ರವರು ನನ್ನ ಹೆಸರಿಗೆ ಬರೆದು ನೀಡಿದ ಅಧಿಕಾರ ಪತ್ರ ಮತ್ತು ದಿಃ 27.09.2022 ರಂದು ಚಿತ್ರದುರ್ಗ ಜಿಲ್ಲಾಧಿಕಾರಿಗಳು ಹೊರಡಿಸಿದ ಒಂದು ಆದೇಶದ ನಕಲು ಧೃಢೀಕೃತ ಪ್ರತಿ ಮತ್ತು ಅರ್ಜಿಯಲ್ಲಿ ಕಾಣಿಸಿದ ಅರ್ಜಿದಾರರ ಜಮೀನಿನಲ್ಲಿ ನಾವು ವಿದ್ಯುತ್ ಲೈನ್ ಎಳೆದ ಬಾಬ್ತು ಅರ್ಜಿದಾರರಿಗೆ ಪರಿಹಾರವೆಂದು ಹಣ ನೀಡಿದ ಬಗ್ಗೆ ಇರುವ ಫೀಲ್ಡ ರಿಪೋರ್ಟ ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿ.ಆರ್-1 ರಿಂದ 3 ಎಂದು ಗುರುತಿಸಲಾಯಿತು.

ಮೇಲಿನ ನನ್ನ ಸಾಕ್ಷಿಯನ್ನು ಪರಿಗಣಿಸಿ ಅರ್ಜಿದಾರರು ನಮ್ಮ ವಿರುದ್ಧ ಸಲ್ಲಿಸಿರುವ ಅರ್ಜಿಯನ್ನು ವಜಾಗೊಳಿಸಲು ಕೋರುತ್ತೇನೆ.

**- ಪಾಟೀ ಸವಾಲು - ಅರ್ಜಿದಾರರ ಪರ ಶ್ರೀ. ಎಂ ಜಿ ಆರ್ ವಕೀಲರ ಪರ ಶ್ರೀ.ಆರ್.ಬಿ. ವಕೀಲರಿಂದ -**

ಅರ್ಜಿಯಲ್ಲಿ ಕಾಣಿಸಿದ ಅರ್ಜಿದಾರರ ಜಮೀನನ್ನು ನಾನು ನೋಡಿರುತ್ತೇನೆ. ಅರ್ಜಿಯಲ್ಲಿ ಕಾಣಿಸಿದ ಗುಡ್ಡದಹಳ್ಳಿ ಗ್ರಾಮದ ಸರ್ವೆ ನಂ. 39/1 ಆಸ್ತಿಯಲ್ಲಿ ನಾವು ನಮ್ಮ ಇಲಾಖೆಯ ವತಿಯಿಂದ ಒಂದು ವಿದ್ಯುತ್ ಕಂಬ ನಿರ್ಮಿಸಿರುವೆವು ಎಂದರೆ ಸರಿ. ಆ ರೀತಿ ವಿದ್ಯುತ್ ಕಂಬ ನಿರ್ವಿಸುವಾಗ ಮತ್ತು ವಿದ್ಯುತ್ ಲೈನ್ ನ್ನು ವಿದ್ಯುತ್ ಲೈನ್ ಎಳೆಯುವಾಗ, ಆ ಕೆಲಸಕ್ಕೆಂದು ಭಾರಿ ಗಾತ್ರದ ವಾಹನಗಳನ್ನು ಉಪಯೋಗಿಸುತ್ತೇವೆ ಎಂದರೆ ಸರಿ.

2) ಅರ್ಜಿಯಲ್ಲಿ ಕಾಣಿಸಿದ ಅರ್ಜಿದಾರರ ಮಾಲೀಕತ್ವದ ಜಮೀನಿನಲ್ಲಿ ನೀವು ವಿದ್ಯುತ್ ಕಂಬ ಹಾಕಿ, ವಿದ್ಯುತ್ ಲೈನ್ ಎಳೆದಾಗ, ಅದರಿಂದ ಆ ಜಮೀನಿಗೆ ಆದ ಹಾನಿಯ ಬಾಬ್ತು ಅರ್ಜಿದಾರರಿಗೆ ಪರಿಹಾರವೆಂದು ರೂ.2,97,621/- ಹಣ ನೀಡಿರುವಿರೆಂದು ಸೂಚಿಸಲಾಗಿ, ಹೌದು ಸದರಿ ಮೊತ್ತದಲ್ಲಿ ಭೂ ಪರಿಹಾರವೆಂದು ರೂ.1,41,216/- ಮತ್ತು ಗೋಪುರ ಅಳವಡಿಕೆಗಾಗಿ ರೂ.1,32,867/- ಮತ್ತು ಬೆಳೆ ನಷ್ಟವೆಂದು ರೂ.23,538/- ಹಣ ಅದರಲ್ಲಿ ಸೇರಿರುವುದೆಂದು ಸಾಕ್ಷಿ ಹೇಳುತ್ತಾರೆ. ಸದರಿ ಅರ್ಜಿದಾರರಿಗೆ ಮೇಲೆ ಹೇಳಿದ ಹಣವನ್ನು ಭೂನಷ್ಟ ಪರಿಹಾರವೆಂದು ನಾವು ಕೊಟ್ಟಿರುವೆವೆಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ನೀವು ನೀಡಿದ ಪರಿಹಾರವು ಭೂನಷ್ಟ ಪರಿಹಾರ ಇರುವುದೆನ್ನುವ ಬಗ್ಗೆ ನಿ.ಆರ್.-2 ಎಂದು ಗುರುತಿಸಿದ ದಾಖಲೆಯಲ್ಲಿ ಉಲ್ಲೇಖ ಇಲ್ಲಾ ಎಂದರೆ ಸರಿಯಲ್ಲ. ಅರ್ಜಿದಾರರ ಮಾಲೀಕತ್ವದ ಜಮೀನಿನಲ್ಲಿ ನಾವು

ನಿರ್ಮಿಸಿದ ವಿದ್ಯುತ್ ಕಂಬ ಮತ್ತೂ ವಿದ್ಯುತ್ ಲೈನಿನ ಕೆಳಭಾಗದ ಜಮೀನಿನಲ್ಲಿ 18 ಮೀ ಅಗಲದ ಜಾಗದಲ್ಲಿ ಯಾವುದೇ ಎತ್ತರವಾದ ಮರಗಿಡ ಹಾಕುವಂತಿಲ್ಲ ಮತ್ತು ಕಟ್ಟಡಗಳನ್ನು ನಿರ್ಮಿಸುವಂತಿಲ್ಲವೆಂದರೆ ಸರಿ. ಮೇಲೆ ಹೇಳಿದಂತೆ ನಾವು ಅರ್ಜಿದಾರರಿಗೆ ನೀಡಿದ ಪರಿಹಾರವು ಬೆಳೆ ನಷ್ಟ ಪರಿಹಾರವಿದ್ದು, ಆದರೆ ಭೂನಷ್ಟ ಪರಿಹಾರವೆಂದು ನಾವು ಅರ್ಜಿದಾರರಿಗೆ ಈ ವರೆವಿಗೂ ಪರಿಹಾರ ಕೊಡದೇ ಇದ್ದು, ಅದರಿಂದ ಆ ವಿಷಯವಾಗಿ ಅರ್ಜಿದಾರರಿಗೆ ಪರಿಹಾರ ಕೊಡಲು ನಾವು ಬಾಧ್ಯರು ಎಂದರೆ ಸರಿಯಲ್ಲ.

3) ನಿ.ಆರ್-3 ಎಂದು ಗುರುತಿಸಿದ ದಾಖಲೆಯನ್ನು ನೀವು ನಿಮ್ಮ ಕಛೇರಿಯಲ್ಲಿ ಕುಳಿತು ತಯಾರಿಸಿರುವಿರೆಂದು ಸೂಚಿಸಲಾಗಿ, ಇಲ್ಲಾ, ಜಮೀನಿಗೆ ಹೋಗಿ ಅಲ್ಲಿ ಸ್ಥಳ ಪರಿಶೀಲನೆ ಮಾಡಿ ಬಂದು ನಂತರ ಆ ದಾಖಲೆ ತಯಾರಿಸಿರುವೆವೆಂದು ಸಾಕ್ಷಿ ಹೇಳುತ್ತಾರೆ. ಅರ್ಜಿಯಲ್ಲಿ ಕೋರಿದಂತೆ ಅರ್ಜಿದಾರರಿಗೆ ನಾವು ಪರಿಹಾರ ಕೊಡಲು ಬಾಧ್ಯರು ಇದ್ದು ಆದರೂ ಕೂಡ ಈಗ ಆ ಬಾಧ್ಯತೆಯಿಂದ ನುಣಚಿಕೊಳ್ಳಲು ನಾನು ನ್ಯಾಯಾಲಯಕ್ಕೆ ಸುಳ್ಳು ಅಂಶದ ಮುಖ್ಯ ವಿಚಾರಣೆ ಸಲ್ಲಿಸಿ ಸುಳ್ಳು ಹೇಳುತ್ತಿರುವೆನೆಂದರೆ ಸರಿಯಲ್ಲ.

ಮರು ವಿಚಾರಣೆ – ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ)

ಓದಿ ಹೇಳಿ ಕೇಳಿ ಸರಿ ಇದೆ.

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.